<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು</u>

**S.C. No. 294/2024**

| ಸಾಕ್ಷಿಯ ಹೆಸರು | ಶ್ರೀ.ಯೊಗೇಶ | ಚಾಸಾಃ | ಪ್ರಾಸಾಃ |
|---|---|---|---|
| ಗಂಡನ ಹೆಸರು | ಲೇಟ್ ಲಕ್ಕಣ್ಣ | 17 | 9 |
| ವಯಸ್ಸು | 43 ವರ್ಷ | ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು. ದಿನಾಂಕ **01.08.2026.** | |
| ಉದ್ಯೋಗ | ಪೇದೆ, ಮಾದನಾಯಕನಹಳ್ಳಿ ಪಿಎಸ್ | | |
| ವಾಸ ಸ್ಥಳ | ಸಪ್ತಗಿರಿ ಲೇಔಟ್, ಬೆಂಗಳೂರು | | |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

ನಾನು ಆಗಸ್ಟ್ 2023 ರಿಂದ ಇಲ್ಲಿಯವರೆಗೂ ಮಾದನಾಯಕನಹಳ್ಳಿ ಪೊಲೀಸ್ ಠಾಣೆಯಲ್ಲಿ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ದಿಃ12.09.2024 ರಂದು ಮಧ್ಯಾಹ್ನ 2.00 ಗಂಟೆಗೆ ಪಿರ್ಯಾದಿಯ ತಮ್ಮ ಮಾಲತೇಶ ಘಟನಾ ಸ್ಥಳವನ್ನು ತೋರಿಸಿದ್ದು ಅಲ್ಲಿ ಏನಾದರೂ ದಾಖಲೆ ಸಿಕ್ಕಿದರೆ ಅದನ್ನು ಪೆನ್ ಡ್ರೈವ್ ನಲ್ಲಿ ಹಾಕಿಕೊಂಡು ಬರುವಂತೆ ನನಗೆ ತಿಳಿಸಿದ್ದು, ಅಲ್ಲಿ ಹೆಚ್‌ಪಿ ಡಾಬಾ ಮತ್ತು ಗುರುಚರಣ್ ಬಾರ್ ನಲ್ಲಿ ಹೋಗಿ ಸಿಸಿಟಿವಿ ಪರಿಶೀಲಿಸಿದಾಗ ಪಿರ್ಯಾದಿ ಮತ್ತು ಆರೋಪಿ ಬಂದು ಹೋಗಿ ಮಾತನಾಡುತ್ತಿದ್ದುದು ಸಿಸಿಟಿವಿಯಲ್ಲಿ ಕಂಡು ಬಂದಿದ್ದು ಸುಜುಕಿ ಎಕ್ಸೆಸ್ ವಾಹನದಲ್ಲಿ ಇಬ್ಬರು ಕುಳಿತುಕೊಂಡು ಹೋಗಿದ್ದು ಅದರಲ್ಲಿ ಸೆರೆಯಾಗಿದ್ದು ನಾನು ಅವುಗಳನ್ನು ನಕಲು ಮಾಡಿ ಪೆನ್ ಡ್ರೈವ್ ಗೆ ಹಾಕಿಕೊಂಡು ಬಂದು ಪಿಎಸ್‌ಐ ರವರಿಗೆ ಕೊಟ್ಟಿರುತ್ತೇನೆ. ಈ ಬಗ್ಗೆ 65(ಬಿ) ಸರ್ಟಿ ಫಿಕೇಟ್ ಅನ್ನು ಕೊಟ್ಟಿರುತ್ತೇನೆ ಅದನ್ನು ನಿ.ಪಿ.15 ಮತ್ತು ಸಹಿಯನ್ನು ನಿ.ಪಿ.15(ಎ) ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಯನ್ನು ಪೆನ್ ಡ್ರೈವ್ ಗಳು ಇಲ್ಲದೇ ಇರುವುದರಿಂದ ಮುಂದೂಡಲಾಯಿತು.

(ಈ ಸಾಕ್ಷಿದಾರರನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಮಾಡಿದ್ದು ಅದನ್ನು ಯಥಾವತ್ತಾಗಿ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ,

**(ಶ್ರೀಮತಿ. ಬಿ.ಎಸ್.ರೇಖಾ )**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.

ಆರೋಪಿ ಪರ ವಕೀಲರು ಕಲಂ. 254 (4) B.N.S.S. ಅಡಿಯಲ್ಲಿ ಅರ್ಜಿ ಸಲ್ಲಿಸಿದ್ದು, ಚಾಸಾ. 2 ಮತ್ತು 11 ರವರ ಮುಖ್ಯ ವಿಚಾರಣೆಯ ನಂತರ ಪಾಟೀ ಸವಾಲು ಮಾಡುವುದಾಗಿ ಹೇಳಿದ್ದು, ಅನುಮತಿ ನೀಡಲಾಯಿತು.

ಆರೋಪಿಯನ್ನು ಪರಪ್ಪನ ಅಗ್ರಹಾರದಿಂದ ವಿಡಿಯೋ ಕಾನ್ಫರೇನ್ಸ ಮೂಲಕ ಹಾಜರು ಪಡಿಸಿದ್ದು ಸಾಕ್ಷಿ ಗುರುತಿಸಿರುತ್ತಾರೆ.

ನ್ಯಾಯಾಲಯದ ಮುಂದೆ ಸೀಲ್ಡ್ ಕವರಿಂದ ತೆಗೆದು ತೋರಿಸಿದ ಶರ್ಟ, ಪ್ಯಾಂಟ್ ಮತ್ತು ಬನಿಯನ್ ಅನ್ನು ಸಾಕ್ಷಿ ಗುರುತಿಸಿದ್ದು ಅವುಗಳನ್ನು ಮು. ಮಾ. 1 ರಿಂದ 3 ಎಂದು ಗುರುತಿಸಲಾಯಿತು.

ಈಗ ನನಗೆ ತೋರಿಸಿದ ಫೋಟೋ ಆ ಸ್ಥಳದಲ್ಲಿ ಮಹಜರ್ ಕಾಲಕ್ಕೆ ತೆಗೆದಿದ್ದು ಅದನ್ನು ನಿಶಾನೆ.ಪಿ. 3 ಎಂದು ಗುರುತಿಸಲಾಯಿತು.

ಆ ವಿಚಾರದಲ್ಲಿ ಪೊಲೀಸರು ಸ್ಥಳಕ್ಕೆ ಬಂದು ನೋಟೀಸ್ ಕೊಟ್ಟು ನನ್ನ ಸಮಕ್ಷಮ, ಎರಡು ಪ್ಲಾ ಸ್ಟಿಕ್ ಪೈಪ್ ಗಳು, ಒಂದು ದೊಣ್ಣೆ, ಕಲ್ಲು, ರಕ್ತ ಕಲೆಯಾದ ಶರ್ಟ ಅನ್ನು ವಶಕ್ಕೆ ಪಡೆದರು ಎಂದರೆ ಸರಿ ಅಲ್ಲ. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದೆರ ಸರಿ ಅಲ್ಲ.

ನಾನು ಅದರ ಸಂಬಂಧವಾಗಿ ಹೇಳಿಕೆ ನೀಡಿದ್ದೇನೆ ಎಂದರೆ ಸರಿ ಅಲ್ಲ. ಸಾಕ್ಷಿ ಹೇಳಿಕೆಯ ಭಾಗವನ್ನು ಓದಿ ತೋರಿಸಿದಾಗ ಸಾಕ್ಷಿ ನಿರಾಕರಿಸಿದ್ದರಿಂದ ಸದರಿ ಹೇಳಿಕೆಯ ಭಾಗವನ್ನು ನಿಶಾನೆ.ಪಿ. 3 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ ಸಮಯ ಕೋರಿದ್ದು, ಯಾವುದೇ ಸೂಕ್ತವಾದ ಕಾರಣ ತೋರಿಸಿಲ್ಲ ಆದ್ದರಿಂದ ಕೋರಿಕೆಯನ್ನು ತಿರಸ್ಕರಿಸಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಆರೋಪಿ ನಂ. 1 ಅನ್ನು ಸೇಲಂ ಕಾರಗೃಹದಿಂದ ಮೊಬೈಲ್ ಸಂಖ್ಯೆ 8217359642 ವಿಡಿಯೋ ಕಾನ್ಫರೇನ್ಸ ಮೂಲಕ ಹಾಜರು ಪಡಿಸಿದ್ದು ಸಾಕ್ಷಿ ಗುರುತಿಸಲ್ಲಿ.

ಸಮಯ ಕೋರಿದ್ದು, ಯಾವುದೇ ಸೂಕ್ತವಾದ ಕಾರಣ ತೋರಿಸಿಲ್ಲ, ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಆರೋಪಿತರ ಪರ ವಕೀಲರು ಗೈರು ಹಾಜರು, ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ಹೆಚ್.ಎಸ್. ವಕೀಲರಿಂದ : ಸಮಯ ಕೋರಿದ್ದು, ರೂಪಾಯಿ 500/- ಖರ್ಚಿನೊಂದಿಗೆ ಮುಂದೂಡಲಾಯಿತು.

ಆರೋಪಿ ಪರ ವಕೀಲರು ಆರೋಪಿಗೆ ಮಾಫೀ ಅರ್ಜಿ ಸಲ್ಲಿಸಿದ್ದು, ಆರೋಪಿಯ ಗುರುತಿನ ಬಗ್ಗೆ ತಕರಾರು ಇಲ್ಲ ಎಂದು ಹೇಳಿರುತ್ತಾರೆ.